

# ಈಗ ಕೊಲ್ಲುವ ಕಷ್ಟವಿಲ್ಲ!

■ ಬಸವರಾಜ ಸಾದರ

ಅಹಿಂಸಾ ಚಿಕನ್ ಸೆಂಟರ್‌ನ ಮುಂಭಾಗದಲ್ಲಿ, ಒಂದರ ಮೇಲೊಂದರಂತೆ ಪೇರಿಸಿಟ್ಟಿದ್ದ ಪಂಜರದ ಜಾಲರಿಯೊಳಗೆ ಒತ್ತೊತ್ತಿ ತುಂಬಲಾಗಿದ್ದ ಕೋಳಿಗಳು ಇದ್ದಕ್ಕಿದ್ದಂತೆ ಒಮ್ಮೆಲೇ ಎಲ್ಲವೂ ಜೋರಾಗಿ ಕೊಕ್ ಕೊಕ್, ಕೊಕ್ ಅಂತ ತಮ್ಮ ತಮ್ಮಲ್ಲೇ ಕಿಚಾಯಿಸಿಕೊಳ್ಳತೊಡಗಿದವು. ‘ಕೆಲಹೊತ್ತು ಕಚ್ಚಾಡಿ ತಾವು ತಾವೇ ಸುಮ್ಮನಾಗುತ್ತವೆ, ಇದೆಲ್ಲ ಮಾಮೂಲು’, ಎಂದೇ ಭಾವಿಸಿದ್ದ ಸೆಂಟರ್ ಮಾಲಕನ ಯೋಚನೆ ಸುಳ್ಳೆನಿಸುವಂತೆ ಅವುಗಳ ಕಚ್ಚಾಟ ನಿಲ್ಲುವ ಬದಲು ಜೋರಾಗುತ್ತಲೇ ಇತ್ತು. ಅಷ್ಟೇ ಅಲ್ಲ; ಇಕ್ಕಟ್ಟಾದ ಆ ಜಾಗೆಯಲ್ಲೇ ಅವು ಒಂದರ ಮೇಲೊಂದರಂತೆ ಎಗರಿ, ಕುಕ್ಕಿ, ತೆವಳಿ, ಪ್ರತಿಯೊಂದೂ ಹಿಂದೆ, ಹಿಂದೆ ಸರಿಯಲು ಯತ್ನಿಸುತ್ತಿದ್ದವು.

ಅವುಗಳ ಅಂದಿನ ವಿಚಿತ್ರ ಸಾಹಚರ್ಯೆ ಮತ್ತು ವಿಭಿನ್ನ ಕೀರಲು ದನಿ ಮಾಲಕನಿಗೆ ದಿಗಿಲು ಹುಟ್ಟಿಸಿದವು.

ತಲೆಯನ್ನು ಕತ್ತರಿಸಿ, ಇನ್ನೇನು ಚರ್ಮ ಸುಲಿದು ತೂಗುಹಾಕಲು ರೆಡಿ ಮಾಡುತ್ತಿದ್ದ ಕೋಳಿಯನ್ನು ಹಲ್ಲಾ ಮಾಡಿದ ಜಾಗೆಯಲ್ಲೇ ಎಸೆದ ಮಾಲಕ ಕುತೂಹಲದಿಂದ ಹೊರಗೆ ಬಂದು ನೋಡುತ್ತಾನೆ! ಊಹಿಸಲೂ ಸಾಧ್ಯವಾಗದ ದೃಶ್ಯ ಅವನ ಕಣ್ಣಿಗೆ ರಾಚತೊಡಗುತ್ತದೆ. ನಂಬಲು ಅಸಾಧ್ಯವಾದ ವೇಗದಲ್ಲಿ ಆ ಕೋಳಿಗಳೆಲ್ಲ ಒಂದನ್ನು ಮತ್ತೊಂದು ಮುಂದಕ್ಕೆ ತಳ್ಳುವ ಸಾಹಸದಲ್ಲಿ ನಿರತವಾಗಿವೆ. ಹಾಗೆ ಮಾಡುತ್ತಿದ್ದ ಪ್ರತಿಯೊಂದು ಕೋಳಿಯೂ ತಾನು ಆದಷ್ಟು ಹಿಂದೆ ಹೋಗಬೇಕೆಂಬ ಭಯ–ಹಟಕ್ಕೆ ಬಿದ್ದಂತಿತ್ತು. ಆ ತಳ್ಳಾಟ ಎಷ್ಟೊಂದು ವೇಗವಾಗಿತ್ತೆಂದರೆ, ಯಾವ ಕೋಳಿ ಎಲ್ಲಿದೆ ಅನ್ನೋದನ್ನು ಗುರುತಿಸಲೂ ಸಾಧ್ಯವಾಗುವಂತಿರಲಿಲ್ಲ.

ಕೋಳಿಗಳ ಈ ಬದಲಾದ ವರ್ತನೆ ಕಳೆದ ಕೆಲವು ದಿನಗಳಿಂದ ನಿಧಾನವಾಗಿ ಶುರುವಾಗಿತ್ತಾದರೂ, ಚಿಕನ್ ಸೆಂಟರ್ ಮಾಲಿಕ ಅದರ ಬಗ್ಗೆ ಹೆಚ್ಚು ಗಮನವನ್ನೇ ಕೊಟ್ಟಿರಲಿಲ್ಲ. ದಿನದಿಂದ ದಿನಕ್ಕೆ ಹೆಚ್ಚಾಗುತ್ತ, ಕ್ರಮಕ್ರಮೇಣ ಇನ್ನೂ ವೇಗಕ್ಕಿಟ್ಟುಕೊಂಡಿದ್ದ ಆ ಜಗಳದ ಹಿಂದಿನ ಮಜಕೂರ ಏನಿರಬೇಕೆಂಬುದನ್ನು ತಿಳಿಯುವ ಕುತೂಹಲ ಅವನಿಗೆ. ಅವನು ನೋಡುತ್ತ ನಿಂತಿರುವಂತೆಯೇ ಇನ್ನೂ ಒಂದು ವಿಚಿತ್ರ ಕಾಣತೊಡಗಿತು! ತೀರ ಹಿಂದೆ ಇದ್ದ ಕೋಳಿ ತನ್ನನ್ನು ಬಚಾವು ಮಾಡಿಕೊಳ್ಳಲು ಮುಂದಿನ ಕೋಳಿಯನ್ನು ನೀನು ಮೊದಲು ಹೋಗು ಎನ್ನುವಂತೆ ಮುಂದೆ ಮುಂದೆ ಒತ್ತುತ್ತಿತ್ತು. ಹಾಗೆ ಮಾಡುವಾಗ ತನ್ನ ಶಕ್ತಿಯನ್ನೆಲ್ಲ ಸಂಚಯಿಸಿ, ಮುಂದಿನ ಕೋಳಿಯ ಕತ್ತನ್ನು ಸಿಟ್ಟಿನಿಂದ ಕಚ್ಚಿದ ಕಾರಣ ಕ್ಷಣದಲ್ಲೇ ಆ ಕೋಳಿ ಸತ್ತು ಬಿದ್ದುಬಿಟ್ಟಿತು. ಅಷ್ಟೊತ್ತಿಗೆ ಸರದಿಯಲ್ಲಿ ಹಿಂದೆ ಬಂದಿದ್ದ ಮತ್ತೊಂದು ಕೋಳಿಯು ತನ್ನ ಮುಂದಿದ್ದ ಕೋಳಿಯನ್ನು ತಿವಿಯುತ್ತ, ಕಚ್ಚುತ್ತ ಅದರ ಕತ್ತನ್ನೂ ಕಚ್ಚಿ ಉರುಳಿಸಿತು. ಅದಾದ ಮೇಲೆ ಹಿಂದೆ ಬಂದಿದ್ದ ಇನ್ನೂ ಒಂದು ಕೋಳಿ ಆ ಕೋಳಿಯ ಕತ್ತು ಕತ್ತರಿಸಿತು! ಈ ಸರದಿ ಹಾಗೇ ಮುಂದುವರೆದು ನೋಡನೋಡುತ್ತಿದ್ದಂತೆಯೇ ಪಂಜರದ ಜಾಲರಿಯೊಳಗಿದ್ದ ಕಡೆಯ ಒಂದು ಕೋಳಿಯನ್ನು ಬಿಟ್ಟು ಇನ್ನುಳಿದವೆಲ್ಲವೂ ಸತ್ತು ಬಿದ್ದುಬಿಟ್ಟವು! ಪಂಜರ ಈಗ ಸತ್ತ ಕೋಳಿಗಳ ಗೂಡಾಗಿತ್ತು.

ಪಂಜರದಲ್ಲಿ ಮುಂದಿದ್ದ ಕೋಳಿಯನ್ನು ಮಾಲಕನು ಮೊದಲು ಹಲ್ಲಾ ಮಾಡುತ್ತಾನೆಂದೂ, ಹಾಗೆ ಮುಂದಿನದು ಸತ್ತರೆ ತನ್ನ ಜೀವ ಉಳಿಯುತ್ತದೆಯೆಂದೂ, ಭಾವಿಸಿದ ಪ್ರತಿಯೊಂದು ಕೋಳಿಯೂ ತನ್ನ ಮುಂದಿನ ಕೋಳಿಯನ್ನು ಮುಂದೆ ತಳ್ಳುವ ಮತ್ತು ಹಾಗೆ ತಳ್ಳುವಾಗ ಮುಂದೆ ಸರಿಯದಿದ್ದರೆ ಸಿಟ್ಟಿನಿಂದ ಕೊಲ್ಲುವ ಕೃತ್ಯ ಎಸಗಿದ್ದನ್ನು ತಿಳಿಯಲು ಅವನಿಗೆ ಬಹಳ ಸಮಯ ಬೇಕಾಗಲಿಲ್ಲ.

‘ಎಷ್ಟು ತಿಳಿವಳಿಕೆ ಬಂದಿದೆ ಈ ಕೋಳಿಗಳಿಗೆ!’ ಎಂದು ಒಳಗೊಳಗೇ ನಕ್ಕ ಚಿಕನ್ ಸೆಂಟರ್ ಮಾಲಿಕನು, ‘ಅಬ್ಬಾ ಇಷ್ಟೊಂದು ಕೋಳಿಗಳನ್ನು ಹಲ್ಲಾ ಮಾಡಲು ನಾನು ಎಷ್ಟು ಗುದ್ದಾಡಬೇಕಿತ್ತು! ನನ್ನ ಆ ಕೆಲಸವನ್ನಾದರೂ ಇವು ಹಗುರ ಮಾಡಿದವಲ್ಲ! ಈಗ ಇವುಗಳನ್ನು ಒಂದೊಂದಾಗಿ ಕೊಲ್ಲುವ ಕಷ್ಟವಿಲ್ಲ. ಆ ಶ್ರಮವನ್ನು ದೂರಮಾಡಿದ ಈ ಕೋಳಿಗಳಿಗೆಲ್ಲ ಒಂದು ದೊಡ್ಡ ಥ್ಯಾಂಕ್ಸ್’ ಎನ್ನುತ್ತಾ ಪಂಜರದೊಳಗೆ ಸತ್ತು ಬಿದ್ದಿದ್ದ ಕೋಳಿಗಳನ್ನು ಒಳಗೆ ಎತ್ತಿ ಒಯ್ದ ಆತ ಒಂದೊಂದೇ ಕೋಳಿಯ ಚರ್ಮ ಸುಲಿಯತೊಡಗಿದ. ■